5C.R.P.67

| |
|---|
| Form No.4 (Civil) Deposition Sheets (R.P.No.57) |

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 172/2022

ದಿನಾಂಕ ಃ 16.06.2025 ರಂದು ಪ್ರಮಾಣ ವಚನ ಬೋದಿಸಲಾಗಿದೆ.

ಸಿ. ಡಬ್ಲ್ಯೂ: 4 ಪಿ. ಡಬ್ಲ್ಯೂ:4

| | |
|---|---|
| ಸಾಕ್ಷಿದಾರರ ಹೆಸರು | ನಾಗಮ್ಮ |
| ಗಂಡನ ಹೆಸರು | ರಾಜಪ್ಪ |
| ವಯಸ್ಸು | 60 ವರ್ಷ |
| ಉದ್ಯೋಗ | ಗೃಹಿಣಿ |
| ವಾಸ | ಬೆಂಗಳೂರು. |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ನ್ಯಾಯಾಲಯದ ಮುಂದೆ ಇರುವ ಆರೋಪಿ ಗೊತ್ತು. ಆತ ನನ್ನ ಭಾವ. ಆರೋಪಿಯ ಹೆಂಡತಿ ಮಹದೇವಮ್ಮ, ನನ್ನ ಅಕ್ಕ. ನನ್ನ ಅಕ್ಕ ತೀರಿಕೊಂಡು ಮುಂದಿನ ಗೌರಿ ಹಬ್ಬಕ್ಕೆ 3 ವರ್ಷ ಆಗುತ್ತದೆ. ಆಕೆ ಮೃತ ಪಡುವ ಕಾಲಕ್ಕೆ ನೆಟಕಲ್ಲಿನಲ್ಲಿ ವಾಸವಿದ್ದರು. ಸದರಿ ನಮ್ಮ ಅಕ್ಕ ಹಾಗೂ ಆರೋಪಿ ಜೊತೆಯಲ್ಲಿ ವಾಸವಿದ್ದರು. ಅವರ ಮಗ ಮೈಸೂರಿನಲ್ಲಿ ಕೆಲಸ ಮಾಡುತ್ತಿದ್ದು, ಆಗಾಗ ಅವರ ಮನೆಗೆ ಬಂದು ಹೋಗುತ್ತಿದ್ದರು. ಆ ಸಮಯದಲ್ಲಿ ನಾನು ಬೆಂಗಳೂರಿನಲ್ಲಿ ವಾಸವಿದ್ದೆನು. ಆರೋಪಿ, ಕೂಲಿಕೆಲಸ ಮಾಡುತ್ತಿದ್ದರು ಮತ್ತು ಆಡು ಹಾಗೂ ಕುರಿ ಮೇಯಿಸುವ ಕೆಲಸ ಮಾಡುತ್ತಿದ್ದರು.

2. ರಾತ್ರಿ 7.30 ಗಂಟೆ ಸಮಯದಲ್ಲಿ, ನನ್ನ ಅಕ್ಕ ತೀರಿಕೊಂಡ ವಿಚಾರ ಗೊತ್ತಾಯಿತು. ನನ್ನ ಅಕ್ಕ ಅಡುಗೆ ಮಾಡುವ ಸಮಯದಲ್ಲಿ ಸ್ಟವ್ ಏನೋ ಸಿಡಿದು ತೀರಿಕೊಂಡಿರಬೇಕು. ಸುಮಾರು 1 ತಿಂಗಳ ಕಾಲ ಆಕೆ ಉಷಾರಿಲ್ಲದೇ ಇದ್ದರು. ಸದರಿ ನಮ್ಮ ಅಕ್ಕನನ್ನು ಮಳವಳ್ಳಿಯ ಸರ್ಕಾರಿ ಆಸ್ಪತ್ರೆಯಲ್ಲಿ ನಾನು ನೋಡಿರುತ್ತೇನೆ. ಯಾರೋ ನನ್ನ ಮಗಳಿಗೆ ಫೋನ್ ಮಾಡಿ ಹೇಳಿದ್ದರು, ಆ ಕಾರಣದಿಂದ ನಾನು ಮಳವಳ್ಳಿಯ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆನು. ನಾನು ಅಕ್ಕನನ್ನು ನೋಡಿದಾಗ, ಆಕೆಗೆ ಸುಟ್ಟ ಗಾಯವಾಗಿತ್ತು, ಹೆಚ್ಚು ಸುಟ್ಟಿರಲಿಲ್ಲ, ಮುಖದ ಮೇಲೆ ಹಾಗೂ ಎದೆಯ ಬಲಭಾಗದಲ್ಲಿ ಸುಟ್ಟು ಹೋಗಿತ್ತು. ಸದರಿ ಆಸ್ಪತ್ರೆ ಯಲ್ಲಿ ಪ್ರಾಸಾ.1 ಮತ್ತು ಪ್ರಾಸಾ.3 ರವರು ಇದ್ದರು.

3. ಪ್ರಾಸಾ.1 ಸಿದ್ದರಾಜು ರವರಿಗೂ ಗಾಯಗಳಾಗಿ ಆಸ್ಪತ್ರೆಯಲ್ಲಿ ಇದ್ದರು. ಆತನ ಮುಖಕ್ಕೆ ಹಾಗೂ ಬಲಕೈ ಗೆ ಸುಟ್ಟ ಗಾಯವಾಗಿತ್ತು. ನನ್ನ ಅಕ್ಕ ಹಾಗೂ ಪ್ರಾಸಾ.1 ರವರನ್ನು ವಿಚಾರಿಸಿದಾಗ, ಸ್ಟವ್ ನಿಂದ ಸುಟ್ಟು ಹೋಗಿ ಗಾಯವಾಗಿರುತ್ತದೆ ಎಂದು ತಿಳಿಸಿರುತ್ತಾರೆ.

4. ನಂತರ ನನ್ನ ಅಕ್ಕನನ್ನು ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಕೆ ಆರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಅಕ್ಕನನ್ನು ಆಸ್ಪತ್ರೆಯಲ್ಲಿ ದಾಖಲಿಸಿದ ನಂತರ ನಾನು ಮನೆಗೆ ಹೋಗಿರುತ್ತೇನೆ. ಸುಮಾರು 15 ದಿನಗಳ ನಂತರ ನನ್ನ ಅಕ್ಕ ಡಿಸ್ಚಾರ್ಜ್ ಆಗಿರುತ್ತಾರೆ ಎಂದು ನನಗೆ ಗೊತ್ತಾಗಿರುತ್ತದೆ. ನಂತರ ಗೌರಿ ಹಬ್ಬದ ಹಿಂದಿನ ದಿನ ನನ್ನ ಅಕ್ಕ ತೀರಿಕೊಂಡಿರುತ್ತಾರೆ.

5. ಆರೋಪಿ ಈಗ ಜೈಲಿನಲ್ಲಿರುತ್ತಾರೆ. ಅವರು ಯಾವ ಕಾರಣದಿಂದ ಜೈಲಿನಲ್ಲಿ ಇದ್ದಾರೆ ಎಂದು ನನಗೆ ತಿಳಿದಿರುವುದಿಲ್ಲ. ನನ್ನ ಅಕ್ಕ ತೀರಿಕೊಂಡ ವಿಚಾರದ ಪ್ರಕರಣದ ಬಗ್ಗೆ ನನಗೆ ತಿಳಿದಿಲ್ಲ. ನನ್ನ ಅಕ್ಕನಿಗೆ ಬೆಂಕಿ ಸುಟ್ಟ ವಿಚಾರದಲ್ಲಿ ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿಲ್ಲ.

(ಈ ಹಂತದಲ್ಲಿ ಮಾನ್ಯ ಸಾ.ಅ ರವರು ಸಾಕ್ಷಿ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಎಂದು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ).

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

6. ನನ್ನ ಅಕ್ಕ, ಪಾಸಾ.1 ಹಾಗೂ ಭಾವ ವಾಸವಿದ್ದ ಹಳೆಯ ಮನೆಯನ್ನು ಹೊಡೆದು, ಹೊಸ ಮನೆಯನ್ನು ಕಟ್ಟಿಸಿದ್ದರು ಎಂದರೆ ಸಾಕ್ಷಿಯು ಸದರಿ ವಿಚಾರ ನನಗೆ ಬೇರೆಯವರ ಮುಖಾಂತರ ಗೊತ್ತಾಗಿರುತ್ತದೆ ಎಂದು ಹೇಳುತ್ತಾರೆ. ಸದರಿ ಮನೆಯ ಗೃಹಪ್ರವೇಶ ಸಮಯದಲ್ಲಿ ನಮಗೆ ಸೂತಕವಿದ್ದುದರಿಂದ, ನಮ್ಮನ್ನು ಕರೆದಿರಲಿಲ್ಲ ಎಂದರೆ ಸಾಕ್ಷಿಯು, ಮನೆಯ ಗೃಹಪ್ರವೇಶದ ವಿಚಾರ ನಮ್ಮ ಅಕ್ಕನ ಮುಖಾಂತರ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. 3 ದಿವಸಗಳಿಗೊಮ್ಮೆ ನಾನು ಮತ್ತು ನನ್ನ ಅಕ್ಕ ಪರಸ್ಪರ ಮಾತನಾಡುತ್ತಿದ್ದೆವು ಎಂದರೆ ಸರಿಯಲ್ಲ. ಮನೆಯ ಗೃಹಪ್ರವೇಶವಾದ ನಂತರ ನಾನು ಮತ್ತು ನನ್ನ ಅಕ್ಕ ಮಾತನಾಡಿಕೊಂಡಿದ್ದೆವು ಎಂದರೆ ಸರಿಯಲ್ಲ. ಸದರಿ ಮಾತುಕತೆಯ ಸಮಯದಲ್ಲಿ, ನನ್ನ ಅಕ್ಕ, ಹೊಸದಾಗಿ ಮನೆ ಕಟ್ಟಿಸಿದ ನಂತರ, ಆರೋಪಿಯು, ಮನೆಯನ್ನು ತಾನು ಕಟ್ಟಿಸಿದ್ದೇನೆ, ಸದರಿ ಮನೆ ತನ್ನದು, ತಾನು ಸಾಕುತ್ತಿರುವ ಆಡುಗಳು ಸಹ ತನ್ನದೆಂದು ಹೇಳಿ ಬೈಯುತ್ತಿದ್ದನೆಂದು ತಿಳಿಸಿದ್ದಳು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ನನ್ನ ಅಕ್ಕ ಭಾವ ಚೆನ್ನಾಗಿದ್ದರು ಎಂದು ಹೇಳುತ್ತಾರೆ. ಸದರಿ ಸಮಯದಲ್ಲಿ, ಆತನು ಕೋಪದಲ್ಲಿ ಬೈದುಕೊಳ್ಳುತ್ತಾನೆ, ಆಮೇಲೆ ಸರಿ ಹೋಗುತ್ತಾನೆ ಎಂದು ಸಮಾಧಾನ ಹೇಳಿದ್ದೆ ಎಂದರೆ ಸರಿಯಲ್ಲ.

7. ದಿಃ 03.08.2022 ರಂದು ರಾತ್ರಿ 8.30 ಗಂಟೆ ಸಮಯದಲ್ಲಿ, ಫ್ರಾಸಾ .1 ರವರು ನನೆ ಫೋನ್ ಮಾಡಿ, ನನ್ನ ತಾಯಿಗೆ , ನನ್ನ ತಂದೆ ಸೀಮೆಎಣ್ಣೆಯನ್ನು ಮೈ ಮೇಲೆ ಸುರಿದು ಬೆಂಕಿಯನ್ನು ಹಚ್ಚಿ ಸುಟ್ಟ ಗಾಯಗಳಾಗಿದ್ದು, ಬೆಂಕಿಯನ್ನು ಹಾರಿಸಲು ಹೋದ ತನಗೂ ಸಹ ಸುಟ್ಟು ಗಾಯವಾಗಿದ್ದು, ಚಿಕಿತ್ಸೆಗಾಗಿ ಮೈಸೂರಿನ ಕೆ ಆರ್ ಆಸ್ಪತ್ರೆಗೆ ಆ್ಯಂಬುಲೆನ್ಸ್ನನಲ್ಲಿ ಕರೆದುಕೊಂಡು ಹೋಗುತ್ತಿರುವುದಾಗಿ ತಿಳಿಸಿದನು ಎಂದರೆ ಸಾಕ್ಷಿಯು ಕೆ ಆರ್ ಆಸ್ಪತ್ರೆಗೆ ಆ್ಯಂಬುಲೆನ್ ನಲ್ಲಿ ಕರೆದುಕೊಂಡು ಹೋಗಿರುವುದು ನಿಜ, ಉಳಿದ ವಿಚಾರ ನನಗೆ ತಿಳಿದಿಲ್ಲ ಎಂದು ಹೇಳುತ್ತಾರೆ. ದಿಃ 04.08.2022 ರಂದು, ನನ್ನ ಅಕ್ಕನನ್ನು ಕೆ ಆರ್ ಆಸ್ಪತ್ರೆಗೆ ಯಲ್ಲಿ ಭೇಟಿ ಮಾಡಿ

ವಿಚಾರಿಸಿದ್ದೆನು ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನನ್ನ ಅಕ್ಕ, ದಿಃ03.08.2022 ರಂದು ಸಂಜೆ 7 ರ ಸಮಯದಲ್ಲಿ, ತಾನು ಮತ್ತು ಫ್ರಾಸಾ.1 ರವರು ಮನೆಯ ಹಾಲ್ ನಲ್ಲಿ ಕುಳಿತಿದಾದಗ, ಆರೋಪಿ, ಹೊಸದಾಗಿ ಮನೆಯನ್ನು ಕಟ್ಟಿಸಿದ ವಿಚಾರದಲ್ಲಿ, ಆಗಾಗಿ ಬೈಯುತ್ತಿದ್ದ ರೀತಿ, ಏಕಾಏಕಿ ಮನೆಯ ಒಳಗೆ ನುಗ್ಗಿ , ಅವರನ್ನು ಬೋಳಿ ಮಕ್ಕಳ, ಸೂಳೆ ಮಕ್ಕಳ, ಅವ್ವ ಮಗನಿಗೆ ಈ ಮನೆ ಕಟ್ಟಿ ಸಾಕಾಗಿತ್ತಾ, ಈ ಮನೆ ತನ್ನದು, ಆಡುಗಳು ತನ್ನದೆಂದು, ನೀವಿಬ್ಬರು ಮನೆಯಿಂದ ಹೋಗಿ ಎಂದು ತಿಳಿಸಿದ್ದಳು ಎಂದರೆ ಸರಿಯಲ್ಲ. ಸದರಿ ಆರೋಪಿಯು ತನ್ನ ಜೊತೆಯಲ್ಲಿ ತಂದಿದ್ದ ಒಂದು ದೊಣ್ಣೆಗೆ ಬಟ್ಟೆಯನ್ನು ಸುತ್ತಿಕೊಂಡಿದ್ದು ಕೊಲೆ ಮಾಡುವ ಉದ್ದೇಶದಿಂದ ಬಾಟಲ್ ನಲ್ಲಿ ತಂದಿದ್ದ ಸೀಮೆಎಣ್ಣೆಯನ್ನು ನನ್ನ ಅಕ್ಕನ ಮೈ ಮೇಲೆ ಎರಚಿ ದೊಣ್ಣೆಗೆ ಸುತ್ತಿಕೊಂಡಿದ ಬೆಂಕಿ ಬಟ್ಟೆಗೆ, ಬೆಂಕಿ ಕಡ್ಡಿ ಕೀರಿ, ಹತ್ತಿಸಿಕೊಂಡು ಅಕ್ಕನ ಮೇಲೆ ಬೆಂಕಿ ಹಚ್ಚಿದರೆಂದು, ಆಗ ಫ್ರಾಸಾ.1 ರವರು ಬೆಂಕಿ ಹಾರಿಸಲು ಹೋಗಿ ಆತನಿಗೂ ಸುಟ್ಟ ಗಾಯಗಳು ಆಗಿ, ನನ್ನ ಅಕ್ಕನಿಗೆ ಮೈ ಕೈ ಇತರೆ ಕಡೆ ಸುಟ್ಟ ಗಾಯಗಳಾಗಿತು ಎಂದು ನನ್ನ ಅಕ್ಕ ತಿಳಿಸಿದರು ಎಂದರೆ ಸರಿಯಲ್ಲ. 02.09.2022 ರಂದು ಪೊಲೀಸರು ನನ್ನನ್ನು ವಿಚಾರೆಣಗೆ ಒಳಪಡಿಸಿದಾಗ, ನನ್ನ ಅಕ್ಕನಿಗೆ ಸುಟ್ಟ ಗಾಯಗಳಾಗಲು ಕಾರಣದ ಬಗ್ಗೆ ತಿಳಿಸಿದ್ದಳೆಂದು ನಾನು ಹೇಳಿಕೆ ನೀಡಿದ್ದೆನು ಎಂದರೆ ಸರಿಯಲ್ಲ. ಸಾಕ್ಷಿಗೆ ಹೇಳಿಕೆಯ '' ನನ್ನ ಭಾವ ಸಿದ್ದೇಗೌಡ ಹೊಸದಾಗಿ ಮನೆಯನ್ನು ಕಟ್ಟಿಸಿದ ನಂತರ ನನ್ನ ಅಕ್ಕನ ಜೊತೆ ಈ ಮನೆಯನ್ನು ನಾನು ಕಟ್ಟಿಸಿದ್ದೇನೆ. ಇದು ನನ್ನದು, ನಾನು ಸಾಕುತ್ತಿರುವ ಆಡುಗಳೂ ಸಹ ನನ್ನದು ಎಂದು ಆಗಾಗ್ಗೆ ಬೈಯುತ್ತಿದ್ದನೆಂಬ ವಿಚಾರವನ್ನು ನನ್ನ ಅಕ್ಕ ನಾನು ಏನಾದರೂ ಯೋಗಕ್ಷೇಮ ವಿಚಾರಿಸಲು ಫೋನ್ ಮಾಡಿದಾಗ ನನ್ನ ಜೊತೆ ಹೇಳಿಕೊಳ್ಳುತಿದ್ದರು. ಅದಕ್ಕೆ ನಾನು ಆಯ್ತು ಏನೋ ಕೋಪದಲ್ಲಿ ಬೈದುಕೊಳ್ಳುತ್ತಾನೆ, ಆಮೇಲೆ ಸರಿ ಹೋಗುತ್ತಾನೆ ಎಂದು ಸಮಾಧನ ಹೇಳಿದ್ದೆ. ದಿಃ 03.08.02022 ರಂದು ರಾತ್ರಿ ಸುಮಾರು 8.00 ಗಂಟೆ ಸಮಯದಲ್ಲಿ ನನ್ನ ಅಕ್ಕನ ಮಗ ನನಗೆ ಫೋನ್ ಮಾಡಿ ತಾಯಿ ಮಹದೇವಮ್ಮಳಿಗೆ ಅಪ್ಪ ಸೀಮೆಎಣ್ಣೆಯನ್ನು ಮೈ ಮೇಲೆ ಸುರಿದು ಬೆಂಕಿ ಹಚ್ಚಿ ಸುಟ್ಟ ಗಾಯಗಳಾಗಿದ್ದು,

ಬೆಂಕಿಯನ್ನು ಆರಿಸಲು ಹೋದ ನನಗೂ ಸಹ ಸುಟ್ಟು ಗಾಯಗಳಾಗಿದ್ದು, ಚಿಕಿತ್ಸೆ ಗಾಗಿ ಮೈಸೂರಿನ ಕೆ ಆರ್ ಆಸ್ಪತ್ರೆ ಗೆ ಆಂಬುಲೆನ್ಸ್ ನಲ್ಲಿ ಕರೆದುಕೊಂಡು ಹೋಗುತ್ತಿರುವುದಾಗಿ ತಿಳಿಸಿದನು. ವಿಚಾರಿ ತಿಳಿದ ನಾನು ದಿಃ 04.08.2022 ರಂದು ಬೆಳಿಗ್ಗೆ ಮೈಸೂರಿನ ಕೆ ಆರ್ ಆಸ್ಪತ್ರೆ ಗೆ ಹೋಗಿ ಆಸ್ಪತ್ರೆ ಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದ ನನ್ನ ಅಕ್ಕ ಮಹದೇವಮ್ಮಳನ್ನು ಏನಾಯಿತು ಎಂದು ವಿಚಾರ ಮಾಡಿದಾಗ, ದಿಃ 03.08.2022 ರಂದು ಸಂಜೆ ಸುಮಾರು 7.00 ಗಂಟೆ ಸಮಯದಲ್ಲಿ ಅಕ್ಕ ಮಹದೇವಮ್ಮ ಮತ್ತು ಮಗ ಸಿದ್ದರಾಜು ಮನೆಯ ಹಾಲ್ ನಲ್ಲಿ ಕುಳಿತಿದ್ದಾಗ, ನನ್ನ ಭಾವ ಸಿದ್ದೇಗೌಡ, ಹೊಸದಾಗಿ ಮನೆಯನ್ನು ಕಟ್ಟಿಸಿದ್ದ ವಿಚಾರವಾಗಿ ಆಗಾಗ್ಗೆ ಬೈಯುತ್ತಿದ್ದ ರೀತಿ ಏಕಾಏಕಿ ಮನೆಯ ಒಳಗಡೆ ನುಗ್ಗಿ ನನ್ನ ಅಕ್ಕ ಮತ್ತು ಅಕ್ಕನ ಮಗನನ್ನು ಬೋಳಿ ಮಕ್ಕಳಾ, ಸೂಳೆ ಮಕ್ಕಳಾ, ಅವ್ವ ಮಗನಿಗೆ ಈ ಮನೆ ಕಟ್ಟಿಸಿ ಸಾಕಾಗಿತ್ತಾ, ಈ ಮನೆ ನನ್ನದು ಆಡುಗಳೂ ನನ್ನದು, ನೀವಿಬ್ಬರೂ ಮನೆಯಿಂದ ಹೊರಗೆ ಹೋಗಿ ಎಂದು ಬೈಯುತ್ತಾ, ತನ್ನ ಜೊತೆಯಲ್ಲಿ ತಂದಿದ್ದ ಒಂದು ದೊಣ್ಣೆಗೆ ಬಟ್ಟೆಯನ್ನು ಸುತ್ತಿಕೊಂಡಿದ್ದು, ಕೊಲೆ ಮಾಡುವ ಉದ್ದೇಶದಿಂದ ಬಾಟೆಲ್ ನಲ್ಲಿ ತಂದಿದ್ದ ಸೀಮೇಎಣ್ಣೆಯನ್ನು ನನ್ನ ಅಕ್ಕನ ಮೈ ಮೇಲೆ ಎರಚಿ ದೊಣ್ಣೆಗೆ ಸುತ್ತಿಕೊಂಡಿದ್ದ ಬಟ್ಟೆಗೆ ಬೆಂಕಿ ಕಡ್ಡಿ ಕೀರಿ ಹತ್ತಿಸಿಕೊಂಡು ತನ್ನ ಅಕ್ಕನ ಮೆ ಮೇಲೆ ಬೆಂಕಿ ಹಚ್ಚಿದಾಗ ನನ್ನ ಅಕ್ಕ ಮಗ ಸಿದ್ದರಾಜು ಬೆಂಕಿ ಆರಿಸಲು ಹೋಗಿ ಆತನಿಗೂ ಸುಟ್ಟ ಗಾಯಗಳಾಗಿ ನನ್ನ ಕ್ಕನಿಗೆ ಮೈ ಕೈ ಇತರೆ ಕಡೆ ಸುಟ್ಟ ಗಾಯಗಳಾಗಿದ್ದು, ಊರಿನಿಂದ ಮಳವಳ್ಳಿ ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ಕೊಡಿಸಿದ ನಂತರ ಕೆ ಆರ್ ಆಸ್ಪತ್ರೆ ಗೆ ಬಂದಿರುವುದಾಗಿ ತಿಳಿಸಿದನು '' ಎಂಬ ಭಾಗವನ್ನು ಓದಿ ಹೇಳಲಾಗಿ ಸಾಕ್ಷಿಯು ಸದರಿ ಹೇಳಿಕೆಯ ಭಾಗವನ್ನು ನಿರಾಕರಿಸಿದುರಿಂದ, ಸದರಿ ಹೇಳಿಕೆಯ ಭಾಗವನ್ನು ನಿಪಿ.12 ಎಂದು ಗುರುತಿಸಲಾಯಿತು.

8. ನನ್ನ ಅಕ್ಕನಿಗೆ ಇಬ್ಬರು ಹೆಣ್ಣು ಮಕ್ಕಳು ಹಾಗೂ ಒಬ್ಬ ಗಂಡು ಮಗ ಇರುತ್ತಾರೆ. ಸದರಿ ಇಬ್ಬರು ಹೆಣ್ಣು ಮಕ್ಕಳು ಮದುವೆಯಾದ ನಂತರ ಬೇರೆ ಕಡೆ ವಾಸವಿರುತ್ತಾರೆ ಎಂದರೆ ಸರಿ. ಫ್ರಾಸಾ.1 ರವರಿಗೆ ಮದುವೆಯಾಗಿರುವುದಿಲ್ಲ ಎಂದರೆ ಸರಿ. ಸದರಿ

ಮನೆಯಲ್ಲಿ ಸಂಪ್ರದಾಯದ ಪ್ರಕಾರ ಯಾರುಾ ದಿನ ದೀಪ ಹಚ್ಚಲು ಇರುವುದಿಲ್ಲ ಎಂದರೆ ಸಾಕ್ಷಿಯು, ಫ್ರಾಸಾ.1 ರವರು ಮೈಸೂರಿನಿಂದ ಮನೆಗೆ ಬಂದು ದೀಪ ಹಚ್ಚುತ್ತಾರೆ ಎಂದು ಹೇಳುತ್ತಾರೆ. ಸದರಿ ಫ್ರಾಸಾ.1 ರವರು ಒಬ್ಬರೇ ಇದ್ದುದರಿಂದ, ಸದರಿಯವರಿಗೆ ಮದುವೆಯನ್ನು ಮಾಡಿಸಬೇಕೆಂದು ಎಂದು ಕುಟುಂಬದಲ್ಲಿ ತೀರ್ಮಾನ ಮಾಡಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ಆ ಕಾರಣದಿಂದ, ಫ್ರಾಸಾ.1 ರವರ ತಂದೆ ಆರೋಪಿಯು ಜೈಲಿನಲ್ಲಿದ್ದರೆ ಫ್ರಾಸಾ,1 ರವರಿಗೆ ಯಾರೂ ಹೆಣ್ಣು ಕೊಡಲು ಮುಂದೆ ಬರುವುದಿಲ್ಲವೆಂದು ನಾವು ತೀರ್ಮಾನಿಸಿ, ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ನನ್ನ ಅಕ್ಕ ಮನೆಯಲ್ಲಿ ಅಡಿಗೆಯನ್ನು ಸ್ಟವ್ ಒಲೆಯಲ್ಲಿ ಮಾಡುತ್ತಿದ್ದರೋ ಅಥವಾ ಕಟ್ಟಿಗೆ ಒಲೆಯಲ್ಲಿ ಮಾಡುತ್ತಿದ್ದರೋ ಎಂದು ನನಗೆ ತಿಳಿದಿಲ್ಲ ಎಂದರೆ ಸಾಕ್ಷಿಯು, ತನಗೆ ತಿಳಿದಿಲ್ಲವೆಂದು ಹೇಳಿ, ಸ್ಟವ್ ಒಲೆಯಲ್ಲಿ ಮಾಡುತ್ತಿದ್ದರು ಎಂದು ಹೇಳುತ್ತಾರೆ. ಆರೋಪಿಯು, ನನ್ನ ಅಕ್ಕನ ಮೇಲೆ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿರುವ ವಿಚಾರ ಗೊತ್ತಿದ್ದರೂ ಸಹ ಫ್ರಾಸಾ.1 ರವರ ಜೀವನವನ್ನು ಸರಿ ಮಾಡಲು, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರವಾಗಿ,ಶ್ರೀಮತಿ ಎಸ್ ಎಂ ಬಿ ವಕೀಲರು - Assistant Defence counsel :**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಃ ಇರುವುದಿಲ್ಲ.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.